A.—Sri VEERENDRA PATIL (Minister for Public Works).—

(*a*) No.

(*b*) As early as possible, depending upon the availability of funds.

Sri RAJA PID NAIK.—May I know whether the Government is aware that by taking up this road the distance between Shorapur and Gulbarga will be reduced by 20 miles?

† Sri VEERENDRA PATIL.—Yes, Sir, that is why this road has been taken over by the P. W. D. for maintenance.

Sri RAJA PID NAIK.—Will the Government provide funds for this work in 1968-69 Budget?

Sri VEERENDRA PATIL.—We have already given instructions to the Engineers concerned to improve this road subject to availability of funds.

ಶ್ರೀ ಎಸ್. ಎಂ ಗುರೆಡ್ಡಿ.—ಈ ರೋಡನ್ನು ಪಿ. ಡಬ್ಲ್ಯು. ಡಿ. ಗೆ ಯಾವಾಗ ತೆಗೆದು ಕೊಳ್ಳಲಾಯಿತು ಮತ್ತು ಇಲ್ಲಿಯವರೆಗೂ ಎಷ್ಟು ಹಣ ಖರ್ಚಾಗಿದೆ?

ಶ್ರೀ ವೀರೇಂದ್ರ ಪಾಟೀಲ್.—ಈ ರಸ್ತೆಯಲ್ಲಿ 2 ವಿಭಾಗಗಳಿವೆ. ಒಂದು ಷೋರಾಪುರದಿಂದ ಸಿದ್ದಾಪುರದವರೆಗೆ ಇನ್ನೊಂದು ಕೆಂಭಾವಿಯಿಂದ ಗೋಗಿಯವರೆಗೆ—ಇರತಕ್ಕ 15 ಮೈಲು 4 ಫರ್ಲಾಂಗ್ ರಸ್ತೆ ಕೆಲಸವನ್ನು ತೆಗೆದುಕೊಂಡಿದ್ದು ತಾ: 15-6-1966ರಲ್ಲಿ ಅದರ ಬಗ್ಗೆ ಇಲ್ಲಿಯವರೆಗೆ ಖರ್ಚಾಗಿರತಕ್ಕದ್ದು ಒಂದು ಲಕ್ಷ 15 ಸಾವಿರದ 200 ರೂಪಾಯಿಗಳು.

Prevention of Fragmentation and Consolidation of Holdings Act

19. Sri M. R. PATIL (Hubli).—

Will the Minister for Revenue and Forests be pleased to state:—

(*a*) the reason for not yet bringing into force, the Mysore Prevention of Fragmentation and Consolidation of Holdings Act;

(*b*) whether rules have been framed under the said Act;

(*c*) if not the reasons for the delay in framing the rules?

A.—Sri G. B. SHANKAR RAO (Deputy Minister for Revenue).—

(*a*) The provisions of the Act cannot be implemented unless and until the rules framed thereunder are finalised. The draft rules are now under scrutiny by the Law Department. Immediately the scrutiny is over, the draft rules will be published inviting objections and suggestions, if any, before final publication of the rules.

(*b*) and (*c*) Do not arise in view of reply to clause (*a*) above.

Sri M. R. PATIL.—May I know when this Act was passed?

Sri G. B. SHANKAR RAO.—As the Hon'ble member is aware, it was passed in the year 1966.

Sri M. R. PATIL.—Will the Government expedite the making of the rules?

Sri G. B. SHANKAR RAO.—We are at it. The rules have been framed and sent to Law Department for scrutiny. After they are received back after scrutiny they will be published calling for objections, if any, and after that they will be finalised and given effect.

ಶ್ರೀ ಎಸ್. ಶರಣಗೌಡ ಇನಾಂದಾರ್.—ರಾ ಡಿಪಾರ್ಟ್‌ಮೆಂಟ್ ಕಡೆಗೆ ಕಳುಹಿಸಿ ಎಷ್ಟು ದಿನಗಳಾದವು ?

ಶ್ರೀ ಜಿ. ಬಿ. ಶಂಕರರಾವ್.—ಮೂರು ನಾಲ್ಕು ತಿಂಗಳುಗಳ ಹಿಂದೆಯೇ ಕಳುಹಿಸಿ ಕೊಡ ಲಾಗಿದೆ ಮತ್ತು ಮೇಲಿಂದ ಮೇಲೆ ಅವರನ್ನು ರಿಮೈಂಡ್ ಕೂಡ ಮಾಡುತ್ತ ಇದ್ದೇವೆ.

1-30 P.M.

ಶ್ರೀ ಎಸ್. ಗೋಪಾಲಗೌಡ.—ಈ ಕಾಯಿದೆಯಾಗಿ ಇಷ್ಟು ದಿವಸಗಳಾದರೂ ರೂಲ್ಸುಗಳನ್ನು ಮಾಡಿ ಆದನ್ನು ಜಾರಿಗೆ ತರುವುದರಲ್ಲಿ ಇಷ್ಟು ವಿಳಂಬವಾಗುತ್ತಿರುವುದರಿಂದ ಈ ಕಾನೂನನ್ನು ಮಾಡಿದುದರ ಉದ್ದೇಶದಲ್ಲಿ ಸರಕಾರಕ್ಕೆ ನಂಬಿಕೆ ಇಲ್ಲ; ಅಥವಾ ಕಾರ್ಯಗತ ಮಾಡುವುದರಲ್ಲಿ ಸಾಮರ್ಥ್ಯವಿಲ್ಲ ಎಂದು ನಾವು ತಿಳಿದುಕೊಳ್ಳೋಣವೇ ?

ಶ್ರೀ ಜಿ. ಬಿ. ಶಂಕರರಾವ್.—ಸರಕಾರಕ್ಕೆ ನಂಬಿಕೆಯೂ ಇದೆ, ಸಾಮರ್ಥ್ಯವೂ ಇದೆ. ಆದರೆ ಈ ಆಕ್ಟ್ ಪಾಸಾದದ್ದು 1966 ರಲ್ಲಿ ಮತ್ತು ಇದಕ್ಕೆ ಪ್ರಸಿಡೆಂಟರವರ ಅಸೆಂಟ್ ದೊರೆತದ್ದು 1967 ನೇ ಜನವರಿಯಲ್ಲಿ. 67 ನೇ ಫೆಬ್ರವರಿಯಲ್ಲಿ ಗೆಜೆಟ್ಟಿನಲ್ಲಿ ನೋಟಿಫೈ ಮಾಡಲಾಗಿದೆ ಮತ್ತು ಇದಕ್ಕೆ ಸಂಬಂಧಿಸಿದಂತೆ ರೂಲ್ಸುಗಳನ್ನೂ ಫ್ರೇಂ. ಮಾಡಿ ರಾ ಡಿಪಾರ್ಟ್‌ಮೆಂಟಿಗೆ ಪರಿಶೀಲನೆಗಾಗಿ ಕಳುಹಿಸಿಕೊಡಲಾಗಿದೆ. ಅವರಿಂದ ವಾಪಸ್ ಬಂದ ಕೂಡಲೇ ಅದಷ್ಟು ಜಾಗ್ರತೆ ಜಾರಿಗೆ ಕೊಡಬೇಕೆಂದು ಸರಕಾರ ಉದ್ದೇಶಿಸಿದೆ. ಈ ವರ್ಷ ಇದಕ್ಕಾಗಿ ಸುಮಾರು 4,36,000 ರೂಪಾಯಿಗಳಷ್ಟು ಪ್ರೊವೈಡ್ ಮಾಡಲಾಗಿದೆ ನಾಲ್ಕನೆ ಯೋಜನೆಯಲ್ಲಿ 51 ಲಕ್ಷದಷ್ಟು ಹಣ ಒದಗಿಸಿಕೊಂಡಿದ್ದೇವೆ.

Sri H. V. KOUJALGI.—Is it not a fact that in the Bombay Karnatak area the old Act is still in operation?

ಶ್ರೀ ಜಿ. ಬಿ. ಶಂಕರರಾವ್.—ನಾವು ಈಗ ಯಾವ ಹೊಸ ಆಕ್ಟನ್ನು ಜಾರಿಗೆ ಕೊಡ ಬೇಕೆಂದಿದ್ದೇವೋ ಅದನ್ನು ಜಾರಿಗೆ ತರುವುದಕ್ಕೆ ಪೂರ್ವದಲ್ಲಿ ಹಿಂದೆ ಈ ಭಾಗದಲ್ಲಿ ಯಾವ ಕಾನೂನು ಜಾರಿಯಲ್ಲಿತ್ತೋ ಅದನ್ನು ಅನುಸರಿಸಲಾಗುತ್ತದೆ. ಅದನ್ನು ಈಗಲೇ ಬಂದ್ ಮಾಡುವುದಕ್ಕೆ ಆಗುವುದಿಲ್ಲ. ಬೊಂಬಾಯಿ ಭಾಗದ ನಾಲ್ಕು ಜಿಲ್ಲೆಗಳಲ್ಲಿ ಅಲ್ಲಿ ಹಿಂದೆ ಇದ್ದ ಕಾನೂನಿನಂತೆಯೇ ಕೆಲಸಗಳು ನಡೆಯುತ್ತಿವೆ. ರಾಜ್ಯಕ್ಕೆಲ್ಲಾ ಒಂದೇ ಕಾನೂನು ಜಾರಿಯಲ್ಲಿ ಬಂದಮೇಲೆ ಹಳೆಯ ಕಾನೂನು ರಿಪೀಲ್ ಆಗುತ್ತದೆ.

ಶ್ರೀ ಸಿ. ಕೆ. ರಾಜಯ್ಯ ಶೆಟ್ಟಿ.—ರ್ಯಾಂಡ್ ರಿಫಾರಂಸ್ ಆಕ್ಟ್ 1956ನೇ ಇಸವಿಯಲ್ಲೇ ಮಾಡಿ ಪ್ರೆಸಿಡೆಂಟರವರ ಅಸೆಂಟ್ ಪಡೆಯಲು 1967 ಆಯಿತು ಮತ್ತು ಇದರ ರೂಲ್ಸುಗಳನ್ನು ಮಾಡು ವುದರಲ್ಲಿ ಇನ್ನೂ ನಿಧಾನವಾಗುತ್ತಿದೆ. ಇದರಿಂದ ದೇಶದಲ್ಲಿರುವ ಜನ ಈಗಾಗಲೇ ತಮ್ಮಲ್ಲಿರುವ ಜಮೀನುಗಳನ್ನು ತಮಗೆ ಇಷ್ಟ ಬಂದಂತೆ ಮಾರಿಕೊಂಡು ಸರಿಮಾಡಿಕೊಂಡಿರುವುದು ಸರಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಜಿ. ಬಿ. ಶಂಕರರಾವ್.—ಮಾನ್ಯ ಸದಸ್ಯರು ಹೇಳಿದಂತೆ 1956 ರಲ್ಲಿ ಆಕ್ಟ್ ಪಾಸು ಆಗಲಿಲ್ಲ. ಆಕ್ಟ್ ಪಾಸಾದದ್ದು 1966 ನೇ ಇಸವಿಯಲ್ಲಿ ಮತ್ತು ರಾಷ್ಟ್ರಪತಿಯವರ ಅಂಗೀ ಕಾರ ದೊರತದ್ದು 1967 ರಲ್ಲಿ. ಸರಕಾರ ಇದನ್ನು ಬೇಗನೆ ಜಾರಿಗೆ ತರಬೇಕೆಂದು ಬೇಕಾದ ಎಲ್ಲ ಸಿದ್ಧತೆಗಳನ್ನೂ ಮಾಡುತ್ತಿದೆ. ಅವಕ್ಕಾಗಿ ಈಗಾಗಲೇ ರೂಲ್ಸು ಮಾಡಿ ರಾ ಡಿಪಾರ್ಟ್‌ಮೆಂಟಿಗೆ ಸ್ಕ್ರುಟಿನಿಗಾಗಿ ಕಳುಹಿಸಿಕೊಡಲಾಗಿದೆ. ಅವರಿಂದ ರೂಲ್ಸುಗಳು ಬಂದ ಕೂಡಲೇ ಇದನ್ನು ಜಾಗ್ರತೆ ಜಾರಿಗೆ ತರಬೇಕೆಂದು ಸರಕಾರದ ಏರ್ಪಾಡುಗಳು ನಡೆಯುತ್ತಿವೆ ಎಲ್ಲ ಪೂರ್ವಭಾವಿ ತಯಾರಿ ಮಾಡಲಾಗುತ್ತಿದೆ.

ಶ್ರೀ ಎಸ್. ಗೋಪಾಲಗೌಡ.—ಭೂಮಿಯು ಹಿಡುವಳಿಗಳನ್ನು ತುಂಡು ತುಂಡು ಮಾಡ ಕೂಡದು ಎಂದು ನಿಗದಿ ಮಾಡಿದ್ದಾರೆ. ಆದರೆ ಇದನ್ನು ತಪ್ಪಿಸಲು ಮಾನೂದೆಯಲ್ಲ ತಾವು ಏನನ್ನೂ ಮಾಡಿಲ್ಲ. ಕೆಲವು ಕತೆ ಬೇರೆಯವರಿಗೆ ಮಾರಿಕೊಳ್ಳುತ್ತಿದ್ದಾರೆ ಮತ್ತು ಸರಕಾರದವರು ದರಖಾಸ್ತಿನಮೇರೆ ಭೂಮಿ ಕೊಡುವಾಗ ಒಂಬ ಎಕರೆ, ಎರಡು ಎಕರೆಗಳೆಂದು ಕೊಡುತ್ತಾರೆ ಮತ್ತು ಕನಿಷ್ಟಹಿಡುವಳಿ ಇಷ್ಟು ಇರಬೇಕೆಂದು ಎಂದೆ ಆರ್ಥಿಕ ಹಿಡುವಳಿ ಇರಬೇಕೆಂದು ಮಾಡಿದ್ದಾರೆ. ಅದಕ್ಕೆ ಕಡಿಮೆ ಇದ್ದರೆ ತುಂಡು ಮಾಡಿಕೊಳ್ಳಕೂಡದು ಏನ್ನುವುದಕ್ಕೆ ಸರಕಾರ ಯಾವ ಕಾರ್ಯಕ್ರಮ ತೆಗೆದುಕೊಂಡಿದೆ?

ಶ್ರೀ ಜಿ. ಬಿ. ಶಂಕರ ರಾವ್.—ಇವೆಲ್ಲ ಕಾನೂನಿನಲ್ಲೇ ಇದೆ. ಎಷ್ಟು ಕ್ಷೇತ್ರವಾದರೆ ತುಂಡಾಗುತ್ತದೆ ಮತ್ತು ಸ್ಟ್ಯಾಂಡರ್ಡ್ ಎಕರೆ ಎಷ್ಟು ಇರಬೇಕು ಎನ್ನುವುದು ಆಕ್ಟ್‌ನಲ್ಲಿ ಇದೆ. ಜಾರಿಗೆ ಕೊಡುವಾಗ ಇದನ್ನೆಲ್ಲಾ ಗಮನಕ್ಕೆ ತೆಗೆದುಕೊಳ್ಳಲಾಗುತ್ತದೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮುಂಬೈ ಕರ್ನಾಟಕದಲ್ಲಿ 1950 ರಿಂದ ಈ ತರಹ ಕಾಯಿದೆ ಜಾರಿಯಲ್ಲಿ ಇದ್ದು ಅಲ್ಲಿಯ ನೌಕರರು ತಮ್ಮ ಭೂಮಿಯನ್ನು ಹಂಚಿಕೊಳ್ಳಲು, ರಾವಣಿ ಕೊಡಲು ಪ್ರತಿಬಂಧಕ ಇದ್ದು 17 ವರ್ಷದಿಂದ ತೊಂದರೆಯಾಗಿದೆ. ಹಿನ್ನೆ ಮಾಡಿ ಕೊಳ್ಳಬೇಕಾದರೆ ಸರ್ಕಾರಕ್ಕೆ ಬರಬೇಕಾಗುತ್ತದೆ. 17 ವರ್ಷದಿಂದ ಇರುವ ತೊಂದರೆಯನ್ನು ತೀವ್ರವಾಗಿ ನಿವಾರಣೆ ಮಾಡಬೇಕೆಂದು ಸರ್ಕಾರದ ಲಕ್ಷಕ್ಕೆ ಬಂದಿದೆಯೇ?

ಶ್ರೀ ಜಿ. ಬಿ. ಶಂಕರ ರಾವ್.—ಮುಂಬೈ ಕರ್ನಾಟಕದಲ್ಲಿ 4 ಜಿಲ್ಲೆಗಳಲ್ಲ ಜಾರಿಯಲ್ಲಿರತಕ್ಕಂಥ ಕಾನೂನುಗಳಿಂದ ತೊಂದರೆಯಾಗಿಲ್ಲ, ಅನುಕೂಲವಾಗಿದೆ. ಮಾನ್ಯ ಸದಸ್ಯರು ಹೇಳುತ್ತಾರೆ. 17 ವರ್ಷದಿಂದ ತೊಂದರೆಯಾಗಿದೆ, ಹೊಸ ಕಾನೂನು ಜಾರಿಗೆ ಕೊಡಬೇಕು ಎಂದು. ಹೊಸ ಕಾನೂನು ಜಾರಿಗೆ ಕೊಡುವ ಉದ್ದೇಶದಿಂದ ತಯಾರಿ ಮಾಡುತ್ತಿದ್ದೇವೆ ಲಾ ಡಿಪಾರ್ಟ್‌ಮೆಂಟ್ ನಿಂದ ರೂಲ್ಸ್ ಪಾಪಸ್ ಬಂದಮೇಲೆ ನೋಟಿಫೈ ಮಾಡಬೇಕು. ಈ ವರ್ಷವೇ ಜಾರಿಗೆ ಕೊಡುವ ಉದ್ದೇಶ ಇದೆ ಎಂದು ಆಗಲೇ ಹೇಳಿದ್ದೇನೆ.

Sri V. N. PATIL.—In the course of the answer, the Hon'ble Minister stated that because of dearth of staff, the Law Department is not in a position to do it early. Then why don't you appoint more persons in the Law Department and ask them to do their duty punctually?

Mr. SPEAKER.—It is a suggestion for action.

ಶ್ರೀ ಎಸ್. ಆರ್. ಬೊಮ್ಮಾಯಿ.—ಮುಂಬೈ ಕರ್ನಾಟಕದಲ್ಲಿ ಜಮೀನು ಮಾರಾಟ ಮಾಡುವುದಕ್ಕೆ ರಾವಣಿ ಮಾಡುವುದಕ್ಕೆ, ಹಿನ್ನೆ ಮಾಡುವುದಕ್ಕೆ 17 ವರ್ಷದಿಂದ ತೊಂದರೆ ಇದೆ. ಎಷ್ಟು ವರ್ಷದಲ್ಲಿ ಹೊಸ ಕಾಯಿದೆ ಜಾರಿಯಲ್ಲಿ ತರುತ್ತೀರಿ?

Sri G. B. SHANKAR RAO.—As early as possible.

Servicing of Irrigation Pump sets

20. Sri DIGAMBARA RAO B. KALMANKAR (Aland).—

Will the Minister for Public Works be pleased to state:—

(*a*) whether the Government is aware that even after the Irrigation Pump Sets are installed by the Agriculturists, the Mysore State Electricitiy Board has failed to give service connections for months together;

(*b*) if so, the reasons therefor;